ರವಾನೆ ಸಂಖ್ಯೆ: **18870/2025**

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ,
ಮೈಸೂರು ದಿನಾಂಕಃ 06.09.2025.

## <u>-:ಟೆಂಡರ್ ಪ್ರಕಟಣೆ ತಿಳುವಳಿಕೆ:-</u>

**ವಿಷಯಃ-** ಜಿಲ್ಲಾ ನ್ಯಾಯಾಲಯದಲ್ಲಿ ಲಭ್ಯವಿರುವ ವಿಲೇವಾರಿಯಾದ ಹರಿದ ಕಡತ ಹಾಗೂ ಕಾಗದ ಪತ್ರಗಳ ವಿಲೇವಾರಿ ಕುರಿತು.

* * * *

ಈ ನ್ಯಾಯಾಲಯದಲ್ಲಿ ಲಭ್ಯವಿರುವ ವಿಲೇವಾರಿಯಾದ ಕಡತಗಳ ಹಾಗೂ ರಿಜಿಸ್ಟರ್ ಗಳ ಹರಿದ ಕಾಗದ ಪತ್ರಗಳನ್ನು ಕೊಂಡುಕೊಳ್ಳಲು ಈ ಕಳಗೆ ನಮೂದಿಸಿರುವ ನಿಯಮ ಮತ್ತು ಷರತ್ತುಗಳಿಗನುಗುಣವಾಗಿ ಮುಚ್ಚಿದ ಲಕೋಟೆಗಳಲ್ಲಿ ಟೆಂಡರುಗಳನ್ನು ಕರೆಯಲಾಗಿದೆ.

<u>ಷರತ್ತುಗಳು</u>

1. ದರವನ್ನು ಒಂದು ಕೆ.ಜಿ. ಆಧಾರದ ಮೇಲೆ ನಮೂದಿಸಬೇಕು.
2. ಅರ್ಜಿದಾರರು ಟೆಂಡರಿನೊಂದಿಗೆ ಭದ್ರತಾ ಠೇವಣಿಯಾಗಿ ರೂ.2,500/- (ಎರಡು ಸಾವಿರದ ಐದುನೂರು ರೂಪಾಯಿ) ಹಣವನ್ನು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಗದು ವಿಭಾಗದಲ್ಲಿ ಪಾವತಿಸಿ ರಶೀತಿಯನ್ನು ಟೆಂಡರ್ ನೊಂದಿಗೆ ಲಗತ್ತಿಸಬೇಕು.
3. ಮೊಹರಾದ ಟೆಂಡರುಗಳನ್ನು ಈ ಕಛೇರಿಗೆ ದಿನಾಂಕಃ **10.10.2025** ರ ಸಂಜೆ **4.30** ಗಂಟೆಯೊಳಗೆ ತಲುಪುವಂತೆ ಕಳುಹಿಸುವುದು.
4. ಮೊಹರಾದ ಟೆಂಡರುಗಳನ್ನು ಈ ಕೆಳಗೆ ಸಹಿ ಮಾಡಿರುವವರ ಸಮ್ಮುಖದಲ್ಲಿ ದಿನಾಂಕಃ**13.10.2025** ರಂದು ಸಂಜೆ **5.00** ಗಂಟೆಗೆ ತೆರೆಯಲಾಗುವುದು.
5. ಅಂಗೀಕೃತವಾದಂತಹ ಟೆಂಡರ್ ದಾರನು 3 ದಿನಗಳ ಒಳಗಾಗಿ ಹರಿದ ಕಡತ ಕಾಗದ ಪತ್ರಗಳು ಹಾಗೂ ರಿಜಿಸ್ಟರ್ ಗಳನ್ನು ವಶಕ್ಕೆ ತೆಗೆದುಕೊಳ್ಳಬೇಕು. ತಪ್ಪಿದ್ದಲ್ಲಿ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಸೂಕ್ತ ಕ್ರಮ ಜರುಗಿಸಲಾಗುವುದು.
6. ವಿಲೇವಾರಿಯಾದ ಮಾಲನ್ನು ಅಂಗೀಕೃತ ಟೆಂಡರುದಾರನೇ ಅವನ ವೆಚ್ಚದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ವೇದಿಕೆ ತಕ್ಕಡಿ ಮೂಲಕ ತೂಕ ಮಾಡಿಕೊಳ್ಳಬೇಕು.
7. ಟೆಂಡರ್ ಅಂಗೀಕೃತವಾಗದವರಿಗೆ ಮಾತ್ರ ಭದ್ರತಾ ಠೇವಣಿ ಹಣವನ್ನು ವಾಪಸ್ಸು ಮಾಡಲಾಗುವುದು.
8. ಟೆಂಡರನ್ನು ಯಾವ ಸಂದರ್ಭದಲ್ಲಿಯಾಗಲೀ, ಯಾವ ಕಾರಣವನ್ನೂ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು ರವರು ಹೊಂದಿರುತ್ತಾರೆ.

ಸಹಿ/-
**(ಉಷಾ ರಾಣಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

/home/ubuntu/PDJ-ADMIN1/1. PR/CRR/TENDER NOTIFICATION.doc

<u>ಪ್ರತಿಗಳನ್ನು ಈ ಕೆಳಕಂಡವರಿಗೆ ರವಾನಿಸುತ್ತಾ ತಮ್ಮ ಕಛೇರಿಯ ನಾಮಫಲಕಗಳಲ್ಲಿ ಪ್ರಕಟಿಸಲು ಕೋರಲಾಗಿದೆ:-</u>

1. ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
2. ಪೊಲೀಸ್ ವರಿಷ್ಠಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
3. ಪೊಲೀಸ್ ಆಯುಕ್ತರು, ಮೈಸೂರು ನಗರ, ಮೈಸೂರು.
4. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
5. ಮೈಸೂರು ಜಿಲ್ಲೆಯ ಎಲ್ಲಾ ಅಧೀನ ನ್ಯಾಯಾಲಯಗಳ ನ್ಯಾಯಾಧೀಶರುಗಳಿಗೆ,
6. ಅಧ್ಯಕ್ಷರು, ವಕೀಲರ ಸಂಘ, ಮೈಸೂರು.
7. ಕ್ಷೇತ್ರ ಪ್ರಚಾರಣಾಧಿಕಾರಿಗಳು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಜೆ.ಎಲ್.ಬಿ. ರಸ್ತೆ, ಮೈಸೂರು.
8. ತಾಲ್ಲೂಕು ಕಛೇರಿ, ಮೈಸೂರು ಜಿಲ್ಲೆ, ಮೈಸೂರು.
9. ಕಛೇರಿ ಪ್ರತಿ